**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್.224/2022**

ಸಾಕ್ಷಿಯನ್ನು ದಿಃ **13.02.2026** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃ ಶ್ರೀ**. HCK **ವಕೀಲರಿಂದ**:

ಅಸಲು ದಾವಾ ಸಂಃ 243/2006 ರಲ್ಲಿ ದಿಃ 20.10.2012ರಂದು ರಾಜಿಯಾಯಿತು ಎಂದರೆ ಗೊತ್ತಿಲ್ಲ. ಸಣ್ಣೆಗೌಡ ನನ್ನ ತಂದೆ. ಸಾಕ್ಷಿಗೆ ಅಸಲು ದಾವಾ ಸಂಃ243/2006ರಲ್ಲಿ ಸಲ್ಲಿಸಿದ ರಾಜಿ ಅರ್ಜಿಯ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ತಂದೆಯ ಸಹಿಯನ್ನು ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಪಿ–15 ಎಂದು ಗುರುತಿಸಲಾಯಿತು. ಸದರಿ ದಾವೆಯ ರಾಜಿಯ ಪ್ರಕಾರ ನನ್ನ ತಂದೆಗೆ ಒಟ್ಟು 11 ಐಟಂ ಆಸ್ತಿಗಳು ಬಂದಿವೆ ಎಂದರೆ ಗೊತ್ತಿಲ್ಲ. ಸದರಿ ರಾಜಿಯ ಪ್ರಕಾರ ನನ್ನ ತಂದೆಗೆ ಒಟ್ಟು 11 ಎಕರೆ 3 ಗುಂಟೆ ಜಮೀನು ಬಂದಿದೆ ಎಂದರೆ ಗೊತ್ತಿಲ್ಲ. ಸರ್ವೇ ನಂಬರ್ 547/1ಎ1ರಲ್ಲಿ ನನ್ನ ತಂದೆಗೆ ಹಿಸ್ಸೆ ಬಂದಿದೆ ಎಂದರೆ ಗೊತ್ತಿಲ್ಲ. ರಾಜಿ ಅರ್ಜಿಯ ಪ್ರಕಾರ ಮಲ್ಲಿನಾಥಪುರ ಗ್ರಾಮದ ಸರ್ವೇ ನಂಬರ್ 13ರಲ್ಲಿ 38 ಗುಂಟೆ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಮಲ್ಲಿನಾಥಪುರ ಗ್ರಾಮದ ಸರ್ವೇ ನಂಬರ್ 99ರಲ್ಲಿ ಎರಡು ಎಕರೆ 9 ಗುಂಟೆ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಮಲ್ಲಿನಾಥಪುರ ಗ್ರಾಮದ ಸರ್ವೇ ನಂಬರ್ 3 ರಲ್ಲಿ 12 ಗುಂಟೆ ನನ್ನ ತಂದೆಯ ಹೆಸರಿಗೆ ಬಂದಿದೆ ಎಂದರೆ ಸರಿ. ನಿಪಿ–15ರ ಪ್ರಕಾರ ಕೃಷ್ಣಾಪುರ ಗ್ರಾಮದ ಸರ್ವೇ ನಂಬರ್ 547/1ಎ1ರಲ್ಲಿ 6 ಗುಂಟೆ ನನ್ನ ತಂದೆಗೆ ಬಂದಿದೆ ಎಂದರೆ ಸರಿ. ಕೃಷ್ಣಾಪುರ ಗ್ರಾಮದ ಸರ್ವೇ ನಂಬರ್ 547/1ಎ2ರಲ್ಲಿ 20.5.05 ಗುಂಟೆ ನನ್ನ ತಂದೆಗೆ ಬಂದಿದೆ ಎಂದರೆ ಸರಿ. ಕೃಷ್ಣಾಪುರ ಗ್ರಾಮದ ಸರ್ವೇ ನಂಬರ್ 547/1ಎಬಿ ರಲ್ಲಿ ನನ್ನ ತಂದೆಗೆ 9 ಗುಂಟೆ ಬಂದಿದೆ ಎಂದರೆ ಸರಿ. ಸರ್ವೇ ನಂಬರ್ 33/ಪಿ2ರಲ್ಲಿ 1 ಎಕರೆ 10 ಗುಂಟೆ ನನ್ನ ತಂದೆಗೆ ಬಂದಿದೆ ಎಂದರೆ ಸರಿ. ನಿಪಿ–15ರ ಪ್ರಕಾರ ಒಟ್ಟು 11 ಎಕರೆ 3 ಗುಂಟೆ ಜಮೀನು ಮತ್ತು ಒಂದು ಮನೆ ನನ್ನ ತಂದೆಗೆ ಬಂದಿದೆ ಎಂದರೆ ಸರಿ. 2015ರಲ್ಲಿ ನನ್ನ ತಂದೆಗೆ ಯಾವುದೇ ಭಾಗ ಬಂದಿಲ್ಲ ಎಂದು ನಾನು ಹೇಳಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನಗೆ ಗೊತ್ತಿರಲಿಲ್ಲ ಆದ್ದರಿಂದ ಹೇಳಿದ್ದೆ. ನಿಪಿ–15ರ ಪ್ರಕಾರ ನನ್ನ ತಂದೆಗೆ 2010ರಲ್ಲಿ ರಾಜಿ ಹಿಸ್ಸೆಯ ಮೂಲಕ ಭಾಗ ಬಂದಿದೆ ಎಂದರೆ ಸರಿ.

2019–2020ನೇ ಸಾಲಿನ ಪಹಣಿಯ ಪ್ರಕಾರ ಸರ್ವೇ ನಂಬರ್ 51/1ರಲ್ಲಿ 10ವರೆ ಗುಂಟೆ ನನ್ನ ತಂದೆಯ ಹೆಸರಿಗೆ ಬಂದಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂ.17 ರಲ್ಲಿ ಹೇಳಿರುವ ಬಗ್ಗೆ ನನ್ನ, ನನ್ನ ತಂದೆ ಮತ್ತು 6ನೇ ಪ್ರತಿವಾದಿಯ ಮಧ್ಯೆ ವಿಭಾಗ ಪತ್ರ ಆಗಿದೆಯೇ ಇಲ್ಲವೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ವಿಭಾಗ ಪತ್ರ ಹಾಜರುಪಡಿಸಿದ್ದಿರಾ ಎಂದರೆ ಮರೆತಿದ್ದೇನೆ. ದಾವಾ ಸ್ವತ್ತು ಈಗಾಗಲೇ ನ್ಯಾಯಾಲಯದ ಮುಂದೆ

ಅಸಲುದಾವಾ ಸಂಃ 243/2006ರಲ್ಲಿ ಆದ ವಿಭಾಗ ಪತ್ರದ ಮೂಲಕ ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾಗಿರುವ ಕಾರಣ ಅದನ್ನು ನಾನು, ನನ್ನ ತಂದೆ ಮತ್ತು 6ನೇ ಪ್ರತಿವಾದಿ ವಿಭಾಗ ಮಾಡಿಕೊಳ್ಳುವ ಅವಕಾಶ ಬರುವುದಿಲ್ಲ ಎಂದರೆ ಗೊತ್ತಿಲ್ಲ. ವಾದಿಗೆ ಮೋಸ ಮಾಡಬೇಕು ಎಂದು ನನ್ನ ಪ್ರತಿವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆ ರೀತಿ ಸುಳ್ಳು ಬರೆಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದ ಪ್ಯಾರಾ ನಂ.8 ರಲ್ಲಿ ಕಾಣಿಸಿರುವ ವಂಶವೃಕ್ಷದಲ್ಲಿ ನನ್ನ, 6ನೇ ಪ್ರತಿವಾದಿ ಮತ್ತು ನನ್ನ ಸಹೋದರಿಗೆ ವಿವಾಹ ಆಗಿದೆಯೇ ಇಲ್ಲವೆ ಎಂದು ಬರೆಯಲು ತೊಂದರೆ ಇತ್ತೇ ಎಂದರೆ ಗೊತ್ತಾಗಲಿಲ್ಲ. ನನಗೆ ಮದುವೆಯಾಗಿದೆ. ನನ್ನ ಪತ್ನಿಯ ಹೆಸರು ವಿಜಯ. ನನ್ನ ಸಹೋದರಿಗೆ ಮದುವೆಯಾಗಿದೆ. ಅವರ ಗಂಡನ ಹೆಸರು ಹಲಗೇಗೌಡ. ನನ್ನ ಸಹೋದರಿಯನ್ನು ಮಲ್ಲಿನಾಥಪುರ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿದೆ. 6ನೇ ಪ್ರತಿವಾದಿಗೆ ಮದುವೆಯಾಗಿದೆ. ಅವರ ಪತ್ನಿಯ ಹೆಸರು ಪುಟ್ಟಗೌರಮ್ಮ. ನಾವು ಸಣ್ಣೇಗೌಡರ ವಂಶಸ್ಥರು ಎಂದು ತೋರಿಸುವ ಬಗ್ಗೆ RD ವಂಶವೃಕ್ಷ ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದ ಪ್ಯಾರಾ ನಂ.8ರಲ್ಲಿ ವಂಶವೃಕ್ಷದ ಬಗ್ಗೆ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ನಾವು ಸಣ್ಣೇಗೌಡರ ಮಕ್ಕಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಅಂತಹ ದಾಖಲೆಯನ್ನು ಹಾಜರುಪಡಿಸದೇ ಇರುವ ಕಾರಣ ಪ್ರತಿವಾದ ಪತ್ರದಲ್ಲಿ ಬರೆದ ವಂಶವೃಕ್ಷ ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ನಮಗೆ ಇನ್ನು 10 ಎಕರೆ ಚಿಲ್ಲರೆ ಜಮೀನು ಇದೆ ಎಂದರೆ ಈ ಹಿಂದೆ ಗೊತ್ತಿರಲಿಲ್ಲ ಈಗ ಗೊತ್ತಾಗಿದೆ. ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿದ್ದು, ವಾದಿಗೆ ಮೋಸ ಮಾಡಬೇಕು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

## ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.